ಉದ್ದದ ರಸ್ತೆ ಕಾಮಗಾರಿ ಯೋಜನೆಯನ್ನು ನೀರಾವರಿ ನಿಗಮದಿಂದ ನಿರ್ವಹಿಸುತ್ತಿದೆ.

**ಶ್ರೀ ಸಿ.ಎನ್. ಬಾಲಕೃಷ್ಣ:** ಅಲ್ಲಿ 15 ಕಿ.ಮೀ.ರಸ್ತೆ ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶವಾಗಿದೆ. ಅದೇರೀತಿ ತಾವು ಉತ್ತರ ಕೊಟ್ಟಿರುವುದರಲ್ಲಿ ನುಗ್ಗೇಹಳ್ಳಿ ಕುಡಿಯುವ ನೀರಿನ ಏತ ನೀರಾವರಿ ಯೋಜನೆ ಪ್ರಗತಿಯಲ್ಲಿದೆ. ಆದರೆ, ಬಾಗೂರಿಗೆ ಸಂಬಂಧಪಟ್ಟ ಹಾಗೆ ನಾನು ಪ್ರಶ್ನೆ ಕೇಳಿದ್ದೆ. ಈ ಸಮಸ್ಯೆ ಇರುವುದರಿಂದ, ನಾನು ಏನು ತಮಗೆ ವಿವರಿಸಿದ್ದೇನೆ, ಕೂಡಲೇ tender approval ಮಾಡಿ ಆ ಭಾಗದ ಜನರ ಸಂಕಷ್ಟಕ್ಕೆ ಆ ಯೋಜನೆ ಪೂರ್ಣಗೊಳಿಸುವುದಕ್ಕೆ ದಯಮಾಡಿ ಅವಕಾಶ ಮಾಡಿ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಟಿ.ಬಿ. ಜಯಚಂದ್ರ:** ಇದು ಕುಡಿಯುವ ನೀರಿನ ವಿಚಾರ ಆಗಿರುವುದರಿಂದ ಇದನ್ನು ಸರ್ಕಾರ ಖಂಡಿತವಾಗಿಯೂ ಪರಿಶೀಲನೆ ಮಾಡುತ್ತದೆ.

**ಶ್ರೀ ಸಿ.ಎನ್. ಬಾಲಕೃಷ್ಣ:** ಈಗಾಗಲೇ ಅದಕ್ಕೆ ಆಡಳಿತಾತ್ಮಕ ಅನುಮೋದನೆಯಾಗಿದೆ.

**ಶ್ರೀ ಟಿ.ಬಿ. ಜಯಚಂದ್ರ:** ನೀವು ಕೇಳಿದ ಮಾಹಿತಿ ಇಲ್ಲಿ ಇಲ್ಲ. ಅದಕೋಸ್ಕರ ನೀವು ಏನು ಸಲಹೆ ಇಟ್ಟಿದ್ದೀರಿ ಅದನ್ನು ಖಂಡಿತವಾಗಿ ಸರ್ಕಾರ ಪರಿಶೀಲಿಸುತ್ತದೆ. Tender ಆಗಿದ್ದರೆ tender final ಮಾಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಟಿ.ಬಿ. ಜಯಚಂದ್ರ: (ಕಾನೂನು ಮತ್ತು ಪಶುಸಂಗೋಪನಾ ಸಚಿವರು):** ದಿನಾಂಕ:14–07–2014 ರ 16ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 228 ಪ್ರಶ್ನೆಗಳ ಪೈಕಿ 200 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.